**ಕರ್ನಾಟಕ ರಕ್ಷಣಾ ವೇದಿಕೆ**

# ತಮಿಳಿನ ಶಿವಾಜಿ ಚಿತ್ರದ ವಿರುದ್ಧ ಪ್ರತಿಭಟನೆ

ಪ್ರೀತಿಯ ಕನ್ನಡಿಗ,

ನಾನು ನಿಮ್ಮೊಂದಿಗೆ ಇಂದು ಹಂಚಿಕೊಳ್ಳಬೇಕಾದ ವಿಷಯ ಕನ್ನಡಿಗನ ಸಾಂಸ್ಕೃತಿಕ ಅಸ್ತಿತ್ವದ ದೃಷ್ಟಿಯಿಂದ, ಮಾರುಕಟ್ಟೆಯ ದೃಷ್ಟಿಯಿಂದ, ನಮ್ಮ ಸ್ವಾಭಿಮಾನದ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ಶಿವಾಜಿ ಹೆಸರಿನ ತಮಿಳು ಭಾಷೆಯ ಚಿತ್ರವೊಂದನ್ನು ಕನ್ನಡ ನಾಡಿನಾದ್ಯಂತ ಬಿಡುಗಡೆ ಮಾಡುವ ಪ್ರಯತ್ನವನ್ನು ಕರ್ನಾಟಕ ರಕ್ಷಣಾ ವೇದಿಕೆ ತೀವ್ರವಾಗಿ ವಿರೋಧಿಸುತ್ತಿದೆ. ಈ ಚಿತ್ರ ಬಿಡುಗಡೆಗೆ ನಮ್ಮ ವಿರೋಧ ಏಕೆ ಎಂಬುದನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ.

ಕಾವೇರಿ ತೀರ್ಪು ಕನ್ನಡಿಗರ ಪಾಲಿಗೆ ಮೋಸದ ತೀರ್ಪಾಗಿದ್ದು ನಾಡಿನಾದ್ಯಂತ ಜನರ ಹೋರಾಟ ನಡೆದಿದ್ದು, ಈ ಹೋರಾಟಕ್ಕೆ ಮೂಲಕಾರಣವೇ ತಮಿಳುನಾಡು ತನ್ನ ರಾಜಕೀಯ ಬಲದಿಂದ ನಡೆಸಿರುವ ಲಾಬಿಯೆನ್ನುವುದು ಸ್ಪಷ್ಟವಾಗಿದೆ. ಇಂತಹ ಲಾಬಿಯ ಮೂಲಕ ನಮ್ಮ ಬದುಕುವ ಹಕ್ಕಿಗೇ ಸಂಚಕಾರ ತರುತ್ತಿರುವ ತಮಿಳುನಾಡಿನವರು ಈ ಚಿತ್ರ ಬಿಡುಗಡೆ ಮಾಡುತ್ತಿರುವುದರ ಹಿಂದೆ ಬರಿಯ ಮನರಂಜನೆಯ ಉದ್ದೇಶವಲ್ಲದೆ ನಮ್ಮ ಆತ್ಮಸ್ಥೈರ್ಯವನ್ನು ಕೊಂದುಹಾಕುವ, ನಮ್ಮ ಮೇಲೆ ಸಾಂಸ್ಕೃತಿಕ ಸಾರ್ವಭೌಮತ್ವ ಸಾಧಿಸುವ ದುರುದ್ದೇಶಗಳಿರುವುದೂ ಗೋಚರವಾಗುತ್ತಿದೆ.

ಕರ್ನಾಟಕ ವಾಣಿಜ್ಯ ಮಂಡಲಿಯ ನಿಯಮದಂತೆ ಬೇರೆ ಭಾಷೆಯ ಚಿತ್ರಗಳು ಮೂಲ ಚಿತ್ರ ಬಿಡುಗಡೆಯಾದ ಏಳುವಾರಗಳ ನಂತರವಷ್ಟೇ ನಾಲ್ಕು ಕೇಂದ್ರಗಳಲ್ಲಿ ಬಿಡುಗಡೆಯಾಗಬಹುದು. ಈ ನಿಯಮವನ್ನು ಉಲ್ಲಂಘಿಸಿ ಶಿವಾಜಿಯನ್ನು ನೂರಾರು ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುವ ಯತ್ನಗಳು ನಡೆದಿವೆ. ಈಗಾಗಲೆ ಯಶಸ್ವಿಯಾಗಿ ನಡೆಯುತ್ತಿರುವ ಚಿತ್ರಗಳು, ಹೊಸದಾಗಿ ಬಿಡುಗಡೆಯಾಗುತ್ತಿರುವ ಚಿತ್ರಗಳು ಚಿತ್ರಮಂದಿರದ ಕೊರತೆ ಎದುರಿಸಲಿವೆ. ಕನ್ನಡ ಚಿತ್ರರಂಗಕ್ಕೆ ಮಾರಕವಾಗುವ ಶಿವಾಜಿ ಬಿಡುಗಡೆಯ ಈ ಕ್ರಮವನ್ನು ನಾವು ವಿರೋಧಿಸುತ್ತೇವೆ.

ನಾವು ಇಲ್ಲಿ ನಮ್ಮದಲ್ಲದ ಶಿವಾಜಿ ಚಿತ್ರವನ್ನು ಬಹಿಷ್ಕರಿಸುತ್ತಿರುವುದು, ಅಂದು ಗಾಂಧೀಜಿ ನಮ್ಮದಲ್ಲದ ವಿದೇಶಿ ಬಟ್ಟೆಗಳನ್ನು ತಿರಸ್ಕರಿಸಿ ಖಾದಿ ಉದ್ಯಮ ಬೆಳೆಯಲು ಸಹಕರಿಸಿದಂತೆ. ನಮ್ಮ ಈ ಕ್ರಮ ಇಲ್ಲಿ ನಮ್ಮ ಕನ್ನಡ ಚಿತ್ರೋದ್ಯಮ ಮತ್ತಷ್ಟು ಗಟ್ಟಿಯಾಗಲು ಸಹಾಯಕಾರಿಯಾಗಲಿದೆ.

ಶಿವಾಜಿ ಚಿತ್ರದ ನಿರ್ದೇಶಕ 'ಶಂಕರ್'. ಕಳೆದ ವರ್ಷ ಬಿಡುಗಡೆಯಾಗಿ ಬೆಂಗಳೂರಿನಲ್ಲಿ ಪ್ರದರ್ಶನಗೊಂಡು ಕನ್ನಡಿಗರ ಆಕ್ರೋಶಕ್ಕೆ ಗುರಿಯಾಗಿ, ಚಿತ್ರಮಂದಿರಗಳಿಂದ ಎತ್ತಂಗಡಿಗೊಂಡ 'ಇಂಸೈ ಅರಸನ್ 23ಮ್ ಪುಲಿಕೇಶಿ' ಚಿತ್ರದ ನಿರ್ಮಾಪಕ ಈತ. ಚಾಲುಕ್ಯ ಮನೆತನದ ಅತ್ಯಂತ ಶ್ರೇಷ್ಠ– ಕನ್ನಡದ ಕಡುಗಲಿ ಪುಲಿಕೇಶಿಗೆ ಅವಮಾನ ಮಾಡಿ, ನಮ್ಮ ನಾಡು ಕಂಡ ಮತ್ತೊಬ್ಬ ಧೀಮಂತ ಸಂಗೊಳ್ಳಿ ರಾಯಣ್ಣ ಎಂಬ ಪಾತ್ರ ಸೃಷ್ಟಿಸಿ ಅವನನ್ನು ದೇಶದ್ರೋಹಿ ಮತ್ತು ಬ್ರಿಟೀಷರ ಏಜಂಟನಂತೆ ಚಿತ್ರಿಸಿ ಕನ್ನಡಿಗರನ್ನು ಅವಮಾನಿಸಿದ್ದಾನೆ ಈತ. ಆ ಬಗ್ಗೆ ಇದುವರೆವಿಗೂ ಕ್ಷಮಾಪಣೆ ಕೇಳಿರದ ಈತನ ಚಿತ್ರವನ್ನು ಬಿಡುಗಡೆ ಮಾಡಲು ಬಿಡುವುದು ಸಾಧ್ಯವೇ ಇಲ್ಲ. ಈ ಹಿಂದೆಯೂ ಸಹ 60ರ ದಶಕದಲ್ಲಿ 'ಕಾಂಚೀ ತಲೈವನ್' ಎಂಬ ಚಿತ್ರ ಕನ್ನಡಿಗರನ್ನು ಅವಹೇಳನ ಮಾಡಿದ ಸನ್ನಿವೇಶಗಳನ್ನು ಹೊಂದಿ ವಿವಾದಕ್ಕೊಳಗಾಗಿದ್ದಾಗ, ಕರ್ನಾಟಕದಲ್ಲಿ ಆ ಚಿತ್ರವನ್ನು ಸ್ಥಗಿತಗೊಳಿಸಲಾಗಿತ್ತು. ಅದರಿಂದಲೂ ಇವರು ಪಾಠ ಕಲಿತಂತೆ ಇಲ್ಲ. ನಮ್ಮನ್ನು ಅವಹೇಳನ ಮಾಡುವ ಉದ್ಧಟತನವನ್ನು ಇಂದಿಗೂ ಮುಂದುವರೆಸಿದ್ದಾರೆ. ಇಂತಹ ಕುಚೇಷ್ಟೆಗೆ ತಕ್ಕ ಉತ್ತರವನ್ನು ತಪ್ಪದೆ ಕೊಡಲಾಗುತ್ತದೆ.

**ಕರ್ನಾಟಕ ರಕ್ಷಣಾ ವೇದಿಕೆ**

ಇತ್ತೀಚೆಗೆ ತಮಿಳುನಾಡಿನಲ್ಲಿ 'ಪ್ರೀತಿ ಏಕೆ ಭೂಮಿ ಮೇಲಿದೆ' ಮತ್ತು 'ಮಾತಾಡ್ ಮಾತಾಡ್ ಮಲ್ಲಿಗೆ' ಕನ್ನಡ ಚಿತ್ರಗಳ ಚಿತ್ರೀಕರಣದ ವೇಳೆಯಲ್ಲಿ ತಮಿಳರು ನಮ್ಮ ಕಲಾವಿದರ ಮೇಲೆ ಹಲ್ಲೆ ನಡೆಸಿ ಅಡ್ಡಿಪಡಿಸಿರುವುದನ್ನು ನಾವು ಗಮನಿಸಿದ್ದೇವೆ. ಇಂತಹ ಘಟನೆ ಇದೇ ಮೊದಲಲ್ಲ. ಕನ್ನಡಿಗರ ಕಣ್ಮಣಿ ಡಾ. ರಾಜಕುಮಾರ್‌ರ ಯಾರಿವನು ಚಿತ್ರತಂಡದ ಮೇಲೆ ಊಟಿಯಲ್ಲಿ ನಡೆಸಿದ ಹಲ್ಲೆಯನ್ನು ಮರೆಯಲಾದೀತೆ?

ಕಾವೇರಿ ತೀರ್ಪಿನ ಹಿನ್ನಲೆಯಲ್ಲಿ ಕನ್ನಡಿಗರು ನಡೆಸುತ್ತಿರುವ ಪ್ರತಿಭಟನೆಗೆ ತಿರುಗೇಟು ನೀಡುವ ಸಲುವಾಗಿಯೇ ಕನ್ನಡದ ಹಾಡುಗಳನ್ನು ಮಾತ್ರ ಹಾಕುತ್ತೇವೆ ಎಂದು ಘೋಷಿಸಿ ಮಾರುಕಟ್ಟೆಯನ್ನು ಗಳಿಸಿದ್ದ, ತಮಿಳುನಾಡಿನಲ್ಲಿ ಆಡಳಿತ ನಡೆಸುತ್ತಿರುವ ಡಿಎಂಕೆ ಪಕ್ಷ ಮೂಲದ SFM93.5 ರೇಡಿಯೋ ವಾಹಿನಿ ನಮ್ಮ ಬೆನ್ನಿಗೆ ಚೂರಿಹಾಕಿ ಆ ವಾಹಿನಿಯನ್ನೀಗ ಹಿಂದಿಮಯ ಮಾಡಿದ್ದಾರೆ. ಸಾಲದೆಂಬಂತೆ ರಾತ್ರಿ ಹೊತ್ತಿನಲ್ಲಿ ತಮಿಳುಹಾಡುಗಳ ಪ್ರಸಾರವನ್ನು ಸಹ ಆರಂಬಿಸಿದ್ದಾರೆ.

ಬಹಳ ಹಿಂದಿನಿಂದಲೂ ತಮಿಳು ಚಿತ್ರ ಪ್ರದರ್ಶನಕ್ಕೆ ಇಲ್ಲಿ ಧಾರಾಳವಾಗಿ ಅನುವು ಮಾಡಿದ್ದೇವೆ. ಆದರೆ ಚೆನ್ನೈ ನಗರ, ಧರ್ಮಪುರಿ, ಕೃಷ್ಣಗಿರಿ, ಕೊಯಂಬತ್ತೂರು ಮತ್ತು ತಮಿಳುನಾಡಿನ ಇತರ ಭಾಗಗಳಲ್ಲಿ ಹಲವು ಲಕ್ಷ ಜನ ಕನ್ನಡಿಗರು ವಾಸಿಸುತ್ತಿದ್ದಾರಲ್ಲಾ, ಅಲ್ಲಿ ಏಕೆ ಕನ್ನಡ ಚಿತ್ರ ಪ್ರದರ್ಶನಕ್ಕೆ ಅವಕಾಶವಿಲ್ಲ? ಹಿಂದೊಮ್ಮೆ ಊಟಿಯಲ್ಲಿ ಡಾ.ರಾಜ್‌ರ ಚಿತ್ರವೊಂದು ಬಿಡುಗಡೆಯಾದಾಗ ಚಿತ್ರಮಂದಿರಕ್ಕೇ ಬೆಂಕಿ ಹಚ್ಚಿ ಪ್ರದರ್ಶನ ನಿಲ್ಲಿಸಿದ್ದರು. ಇಂದಿಗೂ ಅಲ್ಲಿ ಕನ್ನಡ ಚಿತ್ರಗಳು ಪ್ರದರ್ಶನವಾಗುವುದಿಲ್ಲ.

ನಮ್ಮ ನಿಲುವು, ತಮಿಳುನಾಡಿನಲ್ಲಿ ಎಷ್ಟು ಕನ್ನಡ ದೂರದರ್ಶನ ವಾಹಿನಿಗಳನ್ನು ಪ್ರಸಾರ ಮಾಡುತ್ತೀರೋ ಇಲ್ಲಿಯೂ ಅಷ್ಟನ್ನು ಪ್ರಸಾರ ಮಾಡಲು ಬಿಡುತ್ತೇವೆ. ಅಲ್ಲಿ ಕನ್ನಡ ಸಿನಿಮಾಗಳನ್ನು ಬಿಡುಗಡೆ ಮಾಡುವುದಾದರೆ ಇಲ್ಲಿ ತಮಿಳನ್ನು ಬಿಡುತ್ತೇವೆ. ಅಲ್ಲಿ ಅದೆಷ್ಟು ಪ್ರಮಾಣದಲ್ಲಿ ಕನ್ನಡ ಪತ್ರಿಕೆಗಳನ್ನು ಬಿಡುತ್ತೀರೋ ಅಷ್ಟನ್ನೇ ಇಲ್ಲೂ ಬಿಡುತ್ತೇವೆ. ವಾಣಿಜ್ಯ ಮಂಡಲಿಯ ನಿಯಮವನ್ನು ಮುರಿಯಲು ಹೊರಟ ಶಕ್ತಿಗಳು ಅವೆಷ್ಟೆ ದೊಡ್ಡವಾಗಿದ್ದರೂ ನಾವು ಎದುರಿಸಿ ಗೆದ್ದೇ ಗೆಲ್ಲುತ್ತೇವೆ. ಕನ್ನಡ ನೆಲದಲ್ಲಿ ತಮಿಳು ಬ್ಯಾನರ್‌ಗಳನ್ನು, ಪೋಸ್ಟರ್‌ಗಳನ್ನು ರಾರಾಜಿಸಲು ಬಿಡುವ ಪ್ರಶ್ನೆಯೇ ಇಲ್ಲ. ಕರ್ನಾಟಕ ರಕ್ಷಣಾ ವೇದಿಕೆಯ ನಾಲ್ಕು ಲಕ್ಷಕ್ಕೂ ಮಿಗಿಲಾದ ಕನ್ನಡ ಕಾರ್ಯಕರ್ತರು ಈ ತೀರ್ಮಾನಕ್ಕೆ ಬಂದಾಗಿದೆ.

ಕನ್ನಡ ನಾಡಿನ ತಮಿಳರನ್ನು ಸದಾ ಮುಖ್ಯವಾಹಿನಿಯಿಂದ ಹೊರಗೇ ಉಳಿಯುವಂತೆ ಪ್ರೇರೇಪಿಸುತ್ತಿರುವ ಈ ಸಾಂಸ್ಕೃತಿಕ ದಾಳಿಯ ಹುಟ್ಟಡಗಿಸಲಾಗುತ್ತದೆ. ನಮ್ಮ ಈ ಹೋರಾಟದಲ್ಲಿ ನಾಡಿನ ಎಲ್ಲ ಕನ್ನಡಿಗರೂ ಕೈಜೋಡಿಸಬೇಕೆಂದು ಕೋರುತ್ತೇನೆ.

ನಿಮ್ಮ ಪ್ರೀತಿಯ ಕನ್ನಡ ಸೇವಕ
ಟಿ. ಎ. ನಾರಾಯಣ ಗೌಡ